ಮತ್ತೆ ಇದು ರಾತ್ರೆಗೆ! ಸ್ವಾಭಾವಿಕ ಬಸರಲ್ಲಿ ಬಯಕೆಗಳ ಸಂಭ್ರಮ! ಅಸ್ವಾಭಾವಿಕದಲ್ಲಿ ಪಥ್ಯಗಳದ್ದೇ ಸಂತೆ! ಎಲ್ರೂ ಅಂತಾರೆ ತಾಯ್ತನ ಸುಖ ಅಂತೆ. ಅದೇನೋ ಮಂದಾಕಿನಿಗೆ ನರಕ ಅಂತನ್ಸಿತ್ತು. ಹೆತ್ತು ಹೋದ್ರೆ ಸಾಕು ಅನ್ಸಿತ್ತು.

ಇದ್ದಕ್ಕಿದ್ದ ಹಾಗೆ ಅನ್ಸೋದು. ತಡೆಯೋಕಾಗದ ಸೆಕೆ. ಹಸಿವು ಅನ್ಸತ್ತೆ. ತಿನ್ನಕ್ಕಾಗಲ್ಲ. ತಿಂದ್ರೂ ಸೇರಲ್ಲ. ಬಾಯಾರಿಕೆ, ನಿರಂತರ ಬಾಯಾರಿಕೆ. ಜ್ವರ. ಜ್ವರ, ಶೀತ ಬರೋ ಹಾಗಿಲ್ಲ. ಕಾಪಾಡ್ಬೇಕು. ಆರೋಗ್ಯ ಕಾಪಾಡ್ಕೋಬೇಕು. ಯಾಕಂದ್ರೆ ಮಾತ್ರೆ ನುಂಗೋ ಹಾಗಿಲ್ಲ. ಮಗೂಗೂ ತೊಂದ್ರೆ ಆಗುತ್ತೆ. ಅದ್ಯಾವ್ದೋ ಒಮ್ಮೆ ಮೊಣಕೈ ಮೇಲೊಂದು ಕುರ ಎದ್ದಿತ್ತು. ಉಷ್ಣ ಅಂದ್ರು. ಮಾತ್ರೆ ನುಂಗಬಾರ್ದು. ಮಗೂಗೆ ತೊಂದ್ರೆ ಆಗುತ್ತೆ. ಅದು ತಾನಾಗೇ, ಬಲಿತು ಬಾವಾಗಿ ಒಡೀಬೇಕು. ಅಲ್ಲಿವರ್ಗೂ ಅನುಭವಿಸಿದ್ಲು.

ಮನಸ್ಸಿಗನ್ಸೋದು, “ಮಗೂನಾ ಕಾಯ್ತಿದ್ದೀನಾ? ಅಥವಾ ಕುರ ಸಾಕ್ತಿದ್ದೀನಾ?” ಅಂತ.

ತಿಂದದ್ದು ಕುಡ್ದದ್ದು ಯಾವ್ದೂ ಸ್ವಂತಕ್ಕಲ್ಲ. ಒಳಗಿನ ಮಗೂಗೆ. ಯಾರದ್ದೋ ಹಸಿವು, ಬಾಯಾರಿಕೆಗೆ ಅದಕ್ಕೆ ನಾನು ತಿನ್ನಬೇಕು ಕುಡೀಬೇಕು. ಕರ್ಮ! ಆರು ತಿಂಗಳಾಯ್ತು. ಸೀಮಂತದ ಸಂಭ್ರಮ ಮುಗೀತು.

“ಅಲ್ಲಿಗೆ ಕಳ್ಸಿ ಹೆರಿಗೇಗೆ” ಅಮ್ಮ.

“ಡಾಕ್ಟ್ರು ಇಲ್ಲಿದ್ದಾರೆ. ಇಲ್ಲೇ ಆಗ್ಲಿ.” ಅತ್ತೆ.

“ಒಬ್ಬೇ ಮಗ್ಳು. ನಾನು ಮಾಡ್ಬೇಕು.” ಅಮ್ಮ.

“ನನಗೆ ಹೆಣ್ಣು ಮಕ್ಕಿಲ್ಲ, ನನ್ನಿಂದ ಈ ಸುಖ ಕಿತ್ಕೋಬೇಡಿ.” ಅತ್ತೆ.

ಇಬ್ರೂ ಇದ್ದು ಮಾಡೋದು ಎನ್ನೋ ಠರಾವಲ್ಲಿ ಜುಗಲ್ಬಂದಿ ಮುಗಿದಿತ್ತು.

ಮಲಗಿದ್ಲು ಮಂದಾಕಿನಿ. ಹೆತ್ತ ಕನಸು. ಸಣ್ಣಗೆ ಒದ್ದೆ ಅಂತ ಎದ್ಲು. ಆರುತಿಂಗಳ ಕೂಸು ಪಿಂಡವಾಗಿ ಜಾರಿತ್ತು. ಮಂದಾಕಿನಿಯು ಮಂಚದ ಮೂಲೆಯಲ್ಲಿ ಮೌನವಾಗಿ ಕೂತಿದ್ಲು.

ಮೊದ್ಲು ಬಂದದ್ದು ಅಮ್ಮ. ಪಕ್ಕ ಕೂತ್ರು.

“ಮಗು....” ಮುಸು ಮುಸು ಅತ್ರು.

ಮಂದಾಕಿನಿ ದೈನ್ಯದಲ್ಲಿ ಕಣ್ಣುಗಳನ್ನು ತಿರುಗಿಸಿದ್ಲು. “ಒಮ್ಮೆ ಒಮ್ಮೆ ನನ್ನನ್ನು ಮುಟ್ಟು. ಅಮ್ಮ, ಮಗಳು ಕಣೆ. ದುಃಖ ಆಗಿದೆ. ಹೆಗಲು ಬೇಕು ಒರಗೋಕೆ ಅಪ್ಕೋಳ್ಳೆ. ಮಡಿಲು ಕೊಡು ಸುಸ್ತಾಗಿದೆ. ಮುದುರಿ ಮಲಗ್ಬೇಕು ನಾನು, ಅಳ್ಬೇಕು ಆಸರೆ ಕೊಡು... ಕೊಡೇ” ಈ ಮನಸ್ಸಿನ ಮಾತು ಆ ಹೃದಯಕ್ಕೆ ತಲುಪಲೇ ಇಲ್ಲ. ನಿಟ್ಟುಸಿರು ಬಿಟ್ಟು ಮಂದಾಕಿನಿ ತಲೆಕೆಳಗೆ ಹಾಕಿ ಮೌನಕ್ಕೆ ಜಾರಿದ್ಲು.

ಅತ್ತೆ ಬಂದ್ರು. ಅವ್ರೂ ಅತ್ರು. ಹಿಂದೇನೇ ಮಾವ, ಅಪ್ಪ. ಬರೀ ಅತ್ತದ್ದೇ. ಕಣ್ಣು ಗಂಡನ್ನ ಅರಸ್ತು. ಮುಖ್ಯ ಈಗ ಅವನು ಬೇಕು ನನಗೆ. ಅವನ ಸುಳಿವೇ ಇರ್ಲಿಲ್ಲ. ಅರ್ಥ ಮಾಡ್ಕೊಂಡ ಅತ್ತೆ ಅಳ್ತಾನೇ ಸಮಜಾಯಿಷಿ ಕೊಟ್ರು. “ಭಾಳಾ ಆಸೆಯಿಂದ ಇದ್ದ ಕಣೇ. ನಿರಾಸೆ ಆಗ್ಬೋಯ್ತು. ತಲೆ ಕೆಟ್ಬೋಗಿದೆ. ಇವತ್ತು ಮುಖ ನೋಡೋ ಧೈರ್ಯ ಇಲ್ಲ. ಇಲ್ಲಿದ್ದು ನೀವುಗಳೇ ಗಮನಿಸಿ. ನಾನವಳನ್ನು ನಿಧಾನವಾಗಿ ಮಾತಾಡಿಸ್ತೇನೆ ಅಂದ್ಹೋದ.”

ಮಂದಾಕಿನಿಗನ್ನಿಸಿದ್ದು, “ಹೆಣ ಬಿದ್ದಿದ್ರೆ ಬಂದು ಮುಖ ನೋಡಿರೋರು. ಬದುಕಿದ್ದೀನಿ. ಅದಕ್ಕೆ ಮುಖ ನೋಡ್ಲಿಲ್ಲ. ಮಗು ಸತ್ತದ್ದಕ್ಕಳ್ತಿದ್ದಾರಾ! ನಾನು ಬದುಕ್ದೆ ಅಂತ ಅಳ್ತಿದ್ದಾರಾ? ನಾನು ಉಳ್ದು ಮಗು ಸತ್ತಿದ್ದು! ಅಳ್ತಿದ್ದಾರೆ! ಅದೇ ಮಗು ಉಳ್ದು ನಾನು ಸತ್ತಿದ್ರೆ ಅಳ್ತಿದ್ರಾ? ಇಷ್ಟೇ